ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 163/2020

.............................................................................

CW 03
PW 03

| | | |
|---|---|---|
| ಹೆಸರು | : | ಚನ್ನಪ್ಪ ಖಂಡೆಕಾರ |
| ತಂದೆಯ ಹೆಸರು | : | ಮಾರುತಿ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ರೈತಾಪಿ ಕೆಲಸ |
| ವಾಸಸ್ಥಳ | : | ಬೆಳವಟಗಿ, ತಾಃ ಹಳಿಯಾಳ. |

ದಿನಾಂಕ 07-01-2025 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ಸಾಕ್ಷಿಗೆ 1 ಅನ್ನು ತೋರಿಸಿ, ತನ್ನ ಸಹಿಯನ್ನು ಗುರುತಿಸಲು ಸೂಚಿಸಿದ್ದು, ಸಾಕ್ಷಿಯು ಸದರಿ ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯನ್ನು ನಿಪಿ 1 ಬಿ ಎಂದು ಗುರುತಿಸಲಾಯಿತು.

ಸುಮಾರು 6 ವರ್ಷಗಳ ಹಿಂದೆ ಹಳಿಯಾಳದಲ್ಲಿ ತಹಶೀಲ್ದಾರ ಕಚೇರಿಗೆ ಬಂದಾಗ ನಾನು ಪೊಲೀಸ ಠಾಣೆಯ ಹತ್ತಿರ ಹೋಗುವಾಗ ಪೊಲೀಸರು ನನ್ನನ್ನು ನಿಲ್ಲಿಸಿ, ಯಾವ ಊರು ಎಂದು ಕೇಳಿದರು, ನಾನು ಬೆಳವಟಗಿ ಎಂದು ಹೇಳಿದೆ. ನಂತರ ಒಂದು ಖಾಲಿ ಹಾಳೆಯ ಮೇಲೆ ನನ್ನ ಸಹಿ ಪಡೆದರು. ಯಾವ ವಿಚಾರಕ್ಕೆ ಎನ್ನುವುದು ಗೊತ್ತಿಲ್ಲ. ನನ್ನ ಸಮಕ್ಷಮ ಏನನ್ನೂ ಜಪ್ತುಪಡಿಸಿಕೊಂಡಿಲ್ಲ. ನ್ಯಾಯಾಲಯದ ಮುಂದಿರುವ ಮು.ಮಾ. 1 ರಿಂದ 7 ಅನ್ನು ಈ ಹಿಂದೆ ನೋಡಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**<u>ಪಾಟೀ ಸವಾಲು :</u>   ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 21-10-2019 ರಂದು ಚಾಸಾ 1 ರವರು ನನ್ನನ್ನು ಮತ್ತು ಚಾಸಾ 2 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಭಾತ್ಮಿ ವಿಷಯವನ್ನು ತಿಳಿಸಿ, ಪಂಚರಾಗಲು ಕೋರಿಕೊಂಡರು ಎಂದರೆ ಸರಿಯಲ್ಲ. ಅದಕ್ಕೆ ನಾವು ಒಪ್ಪಿಕೊಂಡು ಸರ್ಕಾರಿ ಜೀಪಿನಲ್ಲಿ ನಮ್ಮನ್ನು ನಮ್ಮನ್ನು ನಮ್ಮನ್ನು ಘಟನಾ ಜಾಗಕ್ಕೆ ಕರೆದುಕೊಂಡು ಹೋಗಿ ಆರೋಪಿಯನ್ನು ಬಂಧಿಸಿ ಆತನಿಂದ ಮು.ಮಾ. 1 ರಿಂದ 7 ಅನ್ನು ಜಪ್ತುಪಡಿಸಿಕೊಂಡು ನಿಪಿ 1 ರಂತೆ ಸಂಜೆ 05-15 ರಿಂದ 07-00 ಗಂಟೆಯ ವರೆಗೆ ಪಂಚನಾಮೆ ಜರುಗಿಸಿ ನಿಪಿ 2 ರಂತೆ ಭಾವಚಿತ್ರ ತೆಗೆದರು ಎಂದರೆ ಸರಿಯಲ್ಲ. ಎಲ್ಲ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು :</u>** ಆರೋಪಿ ಪರ ಶ್ರೀಮತಿ ಆರ್ ಎಮ್ ಸಿ ವಕೀಲರು ಏನು ಇಲ್ಲ ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.